**ಸಿ.ಸಿ.ನಂ.:** 1696/2024

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **06-03-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ. ಪಿ.ಎಸ್.ಎನ್. ವಕೀಲರಿಂದ**

ಈ ಪ್ರಕರಣದ ಸಾಲವನ್ನು ವೈಯಕ್ತಿಕ ಉದ್ದೇಶಕ್ಕಾಗಿ ನೀಡಿರುತ್ತೇವೆ. ಸಾಲಗಾರನು ಚಾಲಕ ವೃತ್ತಿಯನ್ನು ಮಾಡುತ್ತಾನೆ. ಈ ಪ್ರಕರಣದ ಸಾಲದ ಜಾಮೀನುದಾರರು ಯಾವ ದಿನಾಂಕದಂದು ಸದಸ್ಯತ್ವವನ್ನು ಪಡೆದಿದ್ದಾರೆ ಎಂಬ ಬಗ್ಗೆ ನನಗೆ ನೆನಪಿಗೆ ಬರುತ್ತಿಲ್ಲ. ಈ ಪ್ರಕರಣದ ಸಾಲವನ್ನು ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಹೊಂದಿರುವ ಉಳಿತಾಯ ಖಾತೆಗೆ ಹಾಕಿರುತ್ತೇವೆ. ಈ ಕುರಿತಾಗಿ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ದಾಖಲಾತಿ ಇರುತ್ತದೆ ಎಂದರೆ ಸಾಕ್ಷಿಯು ಸಾಲಗಾರರ ಸಾಲದ ಖಾತೆಯಿಂದ ಆತನ ಉಳಿತಾಯ ಖಾತೆಗೆ ಜಮಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಲಗಾರನ ಸಾಲದ ಖಾತೆ ನಮ್ಮ ಫಿರ್ಯಾದಿ ಸಂಸೆಥೆಗೆ ಸಂಬಂಧಿಸಿದ ಯಾವ ಖಾತೆಯ ಹಣ ಸಂದಾಯವಾಗಿದೆ ಎಂಬ ಬಗ್ಗೆ ನಮೂದು ಇರುತ್ತದೆ. ನಮ್ಮ ಫಿರ್ಯಾದಿ ಸಂಸ್ಥೆಯಾವ ಖಾತೆಗೆ ಹಣ ಜಮಾ ಆಗಿರುತ್ತದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಅದೇ ರೀತಿಯಾಗಿ ಖಾತೆಯ ನಂಬರನ್ನು ನನಗೆ ಹೇಳಲು ಸಾಧ್ಯವಿಲ್ಲ.

ಸಾಲದ ಹಣವು ಉಳಿತಾಯ ಖಾತೆಗೆ ಜಮಾ ಆದಲ್ಲಿ ಈ ಕುರಿತಾಗಿ ನಮ್ಮ ಬಳಿ ದಾಖಲಾತಿ ಇರುತ್ತದೆ. ಈ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ದಾಖಲೆಯು ನಮ್ಮ ಬಳಿ ಇಲ್ಲದೇ ಇರುವುದರಿಂದ ಸದರಿ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋ ಪಿತನ ಹೆಸರಿನಲ್ಲಿ ಒಂದೇ ಸಾಲದ ಖಾತೆ ಇದೆ. ಸದರಿ ಸಾಲದ ಖಾತೆಗೆ 3 ಜನ ಜಾಮೀನುದಾರರಿದ್ದಾರೆ. ಎಷ್ಟು ಜಾಮೀನುದಾರರು ಇದ್ದಾರೆ ಎಂಬ ಬಗ್ಗೆ ಸಾಲದ ಖಾತೆಯ ಉತಾರನಲ್ಲಿ ಸರಿಯಾಗಿ ನಮೂದಾಗುತ್ತದೆ ಎಂದರೆ ಸಾಕ್ಷಿಯು ಈ ಹಿಂದೆ 2 ಜಾಮೀನುದಾರರ ಹೆಸರೇ ನಮೂದಾಗುತ್ತಿದು ಇಗ ಅದು ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಸರಿಯಾದ software ಅಳವಡಿಸಿದ್ದೀರಿ ಎಂದರೆ ಸಾಕ್ಷಿಯು ಅದು ಹೇಳಲು

ಬರುವುದಿಲ. ಸದರಿ software update ಆಗುತ್ತಿರುತ್ತದೆ ಎಂದು ನುಡಿಯತ್ತಾರೆ. ಪ್ರಸ್ತುತ ಎಲ್ಲಾ ಜಾಮೀನುದಾರರ ಹೆಸರು ಬರುವಂತೆ ಹಾಗೂ ಸರಿಯಾದ ವಿವರ ಬರುವಂತೆ ಸರಿಯಾದ software update ಮಾಡಿರುತ್ತೇವೆ. ಇದು ಎಷ್ಟು ವರ್ಷ ಮಾಡಿರುತ್ತೇವೆ ಎಂದರೆ ಹೇಳಲು ಬರುವುದಿಲ್ಲ.

ನಿಪಿ-13 software update ಆಗಿ ಸರಿಯಾಗಿ ಬರುವಂತಹ ಸಂದರ್ಭದಲ್ಲಿ ಬರುವಂತಹ ದಾಖಲಾತಿಯೇ ಅಥವಾ ಪೂರ್ವದಲ್ಲಿ ಬರುವ ದಾಖಲಾತಿಯೇ ಎಂದರೆ ಸಾಕ್ಷಿಯು software Update ಪೂರ್ವ ದ ದಾಖಲಾತಿ ಎಂದು ನುಡಿಯುತ್ತಾರೆ. ಒಂದು ಬಾರಿ software update ಆದರೆ ಅದರಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂದರೆ ಸರಿ. ಪ್ರಸ್ತುತ ನಾವು ಸಿಲಿಕಾಂನ್ software ಉಪಯೋಗಿಸುತ್ತೇವೆ. ನಿಪಿ-13 ರಲ್ಲಿ ಯಾವ software ನ್ನು ಉಪಯೋಗಿಸಿ ಸದರಿ ದಾಖಲಾತಿಯನ್ನು ಪ್ರಿಂಟ್ ಮಾಡಲಾಗಿದೆ ಎಂಬ ಬಗ್ಗೆ ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-13 ನಮ್ಮ ಸುಳ್ಳು ಪ್ರಕರಣಕ್ಕೆ ಬೇಕಾದಂತೆ ಸೃಷ್ಟಿಸಿಕೊಂಡ ದಾಖಲಾತಿ ಎಂದರೆ ಸರಿಯಲ್ಲ. ಆಕಾರಣದಿಂದಾಗಿ ಸದರಿ ದಾಖಲಾತಿಯಲ್ಲಿ ಯಾವ software ನ್ನು ಅಳವಡಿಸಲಾಗಿದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ